ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ07-07-2026 ರಂದು ಬೊಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ಹಿಲ್ಯಾ ರವರ ಮಕ್ಕಳಾದ ಮೂಕಾ, ದುರ್ಗ್ಯಾ ಮತ್ತು ಕನ್ನಾ ರವರುಗಳು ಒಂದೇ ಕುಟುಂಬದವರು ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಹಿಲ್ಯಾ ನಾಯ್ಕು ರವರಿಗೆ ಗಾಮ್ಯಾ ಎಂಬ ಮಗ ಇದ್ದ ಎಂದರೆ ಸರಿ. ಪ್ರಸ್ತುತ ಸದರಿ ಗಾಮ್ಯಾರವರು ತೀರಿಕೊಂಡಿರುತ್ತಾರೆ . ಅವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ದುರ್ಗ್ಯಾರವರು 1992 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ಕನ್ನಾರವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ಮೂಕಾರವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ಹಿಲ್ಯಾ ನಾಯ್ಕು ರವರ ನಾಲ್ಕು ಜನ ಮಕ್ಕಳಲ್ಲಿ ನನ್ನ ತಂದೆ ದುರ್ಗ್ಯಾ ಮೊದಲನೇಯವರು ಎಂದರೆ ಸರಿ. ಶ್ರೀಮತಿ ತಿಮ್ಮಿ , ಮಾರುತಿ, ಸೀತಾರಾಮ, ಮಹಾಬಲೇಶ್ವರ ಹಾಗೂ ವಸಂತರವರುಗಳು ಮೂಕಾರವರ ವಾರಸುದಾರರು ಎಂದರೆ ಸರಿ. 1 ರಿಂದ 6 ನೇ ಪ್ರತಿವಾದಿಯರು ನನ್ನ ತಂದೆಯಾದ ದುರ್ಗ್ಯಾರವರ ವಾರಸುದಾರರು ಎಂದರೆ ಸರಿ. 7 ರಿಂದ 9 ನೇ ಪ್ರತಿವಾದಿಯರು ಕನ್ನಾ ರವರ ವಾರಸುದಾರರು ಎಂದರೆ ಸರಿ.

ಹಿಲ್ಯಾ ನಾಯ್ಕು ರವರ ಜೀವಿತಾವಧಿಯಲ್ಲಾಗಲಿ ಹಾಗೂ ಅವರ ಮಕ್ಕಳ ಜೀವಿತಾವಧಿಯಲ್ಲಿ ಅವರ ಕುಟುಂಬದಲ್ಲಿ ಅವರುಗಳ ನಡುವೆ ವಿಭಾಗ ಆಗಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹಿಲ್ಯಾ ನಾಯ್ಕು ರವರ ಕಾಲದಲ್ಲಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ವಿಭಾಗ ಆಗಿದೆ ಎಂದು ತೋರಿಸಲು, ದಾಖಲೆಗಳು ಇದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದುರ್ಗ್ಯಾ, ಕನ್ನಾ ಮತ್ತು ಮೂಕಾ ರವರುಗಳು ಬೇರೇ ಬೇರೇಯಾಗಿ ಎಷ್ಟು ವರ್ಷಗಳಿಂದ ವಾಸವಾಗಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಮಾರು 50 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇದೆಯೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇದೇ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನೀವು ಗುರುತಿಸಿರುವ ನಿಶಾನೆಗಳಲ್ಲಿ ಅದು ಯಾವ ದಾಖಲೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ವಾಸಮಾಡಿರುವುದಕ್ಕೆ ಸಂಬಂದಿಸಿದಂತೆ ಮನೆ ನಂಬರ ಇದ್ದು, ಅದಕ್ಕೆ ಸಂಬಂದಿಸಿದಂತೆ ಮನೆ ಕರ ತುಂಬಿರುವ ರಶೀಧಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ನೀವೇನಾದರೂ ಪಂಚಾಯತಿಗೆ ಅರ್ಜಿ ನೀಡಿ, ನೀವೇನಾದರೂ ಮನೆಯ ದಾಖಲೆಗಳನ್ನು ನಿಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ತೀರಿಕೊಂಡಾಗ, ನಾವು ಅರ್ಜಿಯನ್ನು ನೀಡಿದ್ದು , ಅದು ನನ್ನ ತಾಯಿಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ಮುಕಾ ನಾಯ್ಕ ರವರಿಗೆ ಸಂಬಂದಿಸಿದಂತೆ ಅವರ ವಾಸದ ಮನೆಯು ಸರ್ವೆ ನಂ 254/9 ರಲ್ಲಿ ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಬೇಡ್ಕಣಿ ಗ್ರಾಮದ ಮನೆ ನಂ 226 ಯಾರಿಗೆ ಸೇರಿದ್ದು ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ಪಂಚಾಯತಿ ದಾಖಲೆಗಳಲ್ಲಿ ಸದರಿ ಮನೆ ನಂಬರ ಇರುತ್ತದೆ ಎಂದರೆ ಸರಿ. ಪಂಚಾಯತಿ ದಾಖಲೆಗಳಲ್ಲಿ ಬೇಡ್ಕಣಿ ಗ್ರಾಮದ ಮನೆ ನಂ 226 ಮುಕಾ ನಾಯ್ಕ ರವರ ಹೆಸರಿನಲ್ಲಿ ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಮನೆಯು ಮೊದಲಗೆ ದನದಕೊಟ್ಟಿಗೆ ಆಗಿದ್ದು ಮೂಕಾ ನಾಯ್ಕರವರು ನನ್ನ ತಂದೆಯ ಬಳಿ ಬಂದು , ಅವರು ಮನೆ ಕಟ್ಟುವವರೆಗೂ ಸ್ವಲ್ಪ ದಿನಗಳ ಕಾಲ ಸದರಿ ಸ್ಥಳದಲ್ಲಿ ಉಳಿದುಕೊಳ್ಳುತ್ತೇನೆ ಎಂದು ಹೇಳಿದ್ದರಿಂದ ನನ್ನ ತಂದೆಯವರು ಸದರಿ ಸ್ಥಳವನ್ನು ಮೂಕಾ ನಾಯ್ಕ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಬಿಟ್ಟುಕೊಟ್ಟಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಸ್ಥಳವನ್ನು ನಿಮ್ಮ ತಂದೆ ಯಾವಾಗ ಬಿಟ್ಟುಕೊಟ್ಟಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುಕಾ ನಾಯ್ಕ ರವರಿಂದ ಸದರಿ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ಮೇಲೆ ಹೇಳಿದ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಖುಲ್ಲಾ ಪಡಿಸುವ ಸಲುವಾಗಿ ಎಷ್ಟು ವರ್ಷಗಳ ಅವಧಿಗೆ ಮಾತುಕತೆ ಆಗಿತ್ತೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದು ನನ್ನ ತಂದೆಯವರಿಗೆ ಗೊತ್ತಿದ್ದು , ಮನೆಕಟ್ಟಿದ ನಂತರ ಬಿಟ್ಟು ಕೊಡುತ್ತೇನೆ ಎಂದು ಮೂಕಾರವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ಮನೆಯನ್ನು ಖುಲ್ಲಾ ಪಡಿಸಿಕೊಳ್ಳುವ ಬಗ್ಗೆ ನೀವೇನಾದರೂ ಕಾನೂನು ಕ್ರಮ ಜರುಗಿಸಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೋಲೀಸ ಕಂಪ್ಲೇಂಟ್ ನೀಡಿರುತ್ತೆವೆ ಎಂದು ನುಡಿಯುತ್ತಾರೆ.

ಬೇಡ್ಕಣಿ ಗ್ರಾಮದ ಮನೆ ನಂ 226 ರ ಒಟ್ಟು ಕ್ಷೇತ್ರ 5 ಗುಂಟೆ ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು 10 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಸೀತಾರಾಮ ರವರು ಬಹಳ ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಪ್ರಸ್ತುತ ಸೀತಾರಾಮ ರವರು ಸದರಿ ಮನೆಯಲ್ಲಿ



ವಾಸ ಮಾಡುತ್ತಿದ್ದು, ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .

ಮುಕಾ ರವರು ಎಷ್ಟನೇ ಇಸವಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಪಂಚಾಯತಿ ದಾಖಲೆಗಳಲ್ಲಿ ಬೇಡ್ಕಣಿ ಗ್ರಾಮದ ಮನೆ ನಂ 226 ವಾದಿಯ ಹೆಸರಿಗೆ ಯಾವಾಗ ಬಂದಿರುತ್ತದೆ ಎಂದು ನಿಮಗೆ ಗೊತ್ತಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ . ಸದರಿ ಮನೆ ಸಂಖ್ಯೆ 226 ಕ್ಕೆ ತಾಗಿ ಸರ್ವೆ ನಂ 254/8 ಇದ್ದು, ಅದರಲ್ಲಿ ಯಾರ ಮನೆ ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾರಾಯಣ ವೀರಭದ್ರ ನಾಯ್ಕ ಮತ್ತು ಅವರ ಮಕ್ಕಳು ಈಶ್ವರ ರವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ .

ಸರ್ವೆ ನಂ 254/9 ರಲ್ಲಿ ವಾದಿಗೆ ಸೇರಿದ ಮನೆಯನ್ನು ಹೊರತುಪಡಿಸಿ ಬೇರೆ ಮನೆ ಇರುತ್ತದೆಯೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಬಾನ್ಕೂಳಿ ಗ್ರಾಮ ಸರ್ವೆ ನಂ 126/1 ರ 2 ಎಕರೆ ಜಮೀನು ಹ್ಯಿಲಾ ನಾಯ್ಕ ರವರ ಕುಟುಂಬದ ಪರವಾಗಿ ದುರ್ಗಾ, ಕನ್ನಾ ಮತ್ತು ಮೂಕಾ ರವರ ಹೆಸರಿಗೆ 1981 ರಲ್ಲಿ ಭೂನ್ಯಾಯ ಮಂಡಳಿಯಿಂದ ಮಂಜೂರಾದ ಜಮೀನು ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೂಲತಃ ಸದರಿ ಜಮೀನನ್ನು ನನ್ನ ತಂದೆಯವರು ಒಬ್ಬರೇ ಸಾಗುವಳಿ ಮಾಡುತ್ತಿದ್ದು, ಇನ್ನೂ ಇಬ್ಬರ ಹೆಸರು ಹೇಗೆ ಬಂದಿರುತ್ತದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ .

ಭೂನ್ಯಾಯ ಮಂಡಳಿಯಿಂದ ಮೂರು ಜನರ ಹೆಸರಿಗೆ ಅಧಿಬೋಗದಾರಿಕೆಯ ಬಗ್ಗೆ ಆಗಿರುವ ಆದೇಶವನ್ನು ನನ್ನ ತಂದೆಯಾಗಲಿ ಅಥವಾ ನಾನಾಗಲಿ ಪ್ರಶ್ನಿಸಿರುವುದಿಲ್ಲ. ಭೂನ್ಯಾಯ ಮಂಡಳಿಯ ಆದೇಶದ ಮೇರೆಗೆ ನಿ.ಪಿ –5 ರಂತೆ ದುರ್ಗಾ , ಕನ್ನಾ ಹಾಗೂ ಮುಕಾ ರವರ ಹೆಸರಿಗೆ ಮೇಲೆನ ಸ್ವತ್ತು ಮ್ಯೂಟೇಶನ್ ಆಗಿರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯವರು ಅನಾರೋಗ್ಯದಲ್ಲಿ ಇದ್ದ ಕಾರಣ ಆ ಸಂದರ್ಬದಲ್ಲಿ ಕನ್ನಾ ಮತ್ತು ಮುಕಾ ರವರುಗಳು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಮ್ಯೂಟೇಶನ್ ನ್ನು ನಿಮ್ಮ ತಂದೆಯಾಗಲಿ ಅಥವಾ ನೀವಾಗಲಿ ಪ್ರಶ್ನೆ ಮಾಡಿರುತ್ತಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ಯವರು ಶಿರಸಿಗೆ ಹೋಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ಹೇಳಿದ್ದು, ಅದರ ಬಗ್ಗೆ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಮ್ಯೂಟೇಶನ್ ನ್ನು ಪ್ರಶ್ನೆ ಮಾಡಿರುವುದಿಲ್ಲ.



1981 ನೇ ಇಸವಿಯಲ್ಲಿ ದುರ್ಗಾ , ಕನ್ನಾ ಹಾಗೂ ಮುಕಾ ರವರುಗಳು ಒಟ್ಟಿಗೆ ವಾಸ್ತವ್ಯ ಇದ್ದ ಕಾರಣ ಅವರ ಹೆಸರಿಗೆ ಭೂನ್ಯಾಯ ಮಂಡಳಿಯಿಂದ ಜಂಟಿಯಾಗಿ ಮೇಲಿನ ಸ್ವತ್ತು ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ.

ಬಾನ್ಕೂಳಿ ಗ್ರಾಮದ ಜಂಗಲ್ ಸರ್ವೆ ನಂ 12/ಅ ರಲ್ಲಿ ನಿಮ್ಮ ಹೇಳಿಕೆ ಪ್ರಕಾರ 1 ಎಕರೆ ಜಮೀನನ್ನು ಯಾವಾಗಿನಿಂದ ಸಾಗುವಳಿ ಮಾಡುತ್ತಿದ್ದಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು 1967 ನೇ ಇಸವಿಯಿಂದ ಸಾಗುವಳಿ

ಮಾಡುತ್ತಿದ್ದೆವೆ ಎಂದು ನುಡಿಯುತ್ತಾರೆ . ಸದರಿ ಸ್ವತ್ತನ್ನು ಒಟ್ಟು ಕುಟುಂಬದಿಂದ ಅತಿಕ್ರಮಣ ಮಾಡಿ ಸಾಗುವಳಿ ಮಾಡಿಕೊಂಡು ಬಂದಿರುವುದಾಗಿದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯವರು ಮಾತ್ರ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

1998 ನೇ ಇಸವಿಯಲ್ಲಿ ಮೇಲೆ ಹೇಳಿದ ಸ್ವತ್ತು ನಿಮ್ಮ ತಾಯಿಯ ಹೆಸರಿಗೆ ಅವಿಭಕ್ತ ಕುಟುಂಬದ ಪರವಾಗಿ ಮಂಜೂರಾಗಿರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯಿಂದ ನನ್ನ ತಾಯಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ . ನನ್ನ ತಂದೆ ಹಿರಿಯ ಮಗನಾದ ಕಾರಣ , ಕೆಲವೊಂದು ದಾಖಲೆಗಳು ಅವರ ಹೆಸರಿನಲ್ಲಿ ಒಟ್ಟು ಕುಟುಂಬದಲ್ಲಿ ಮುಂದುವರೆದಿರುತ್ತದೆ ಎಂದರೆ ಸರಿಯಲ್ಲ .

ಬೇಡ್ಕಣಿ ಗ್ರಾಮದ ಸರ್ವೆ ನಂ 254/9 ರಲ್ಲಿ 10 ಗುಂಟೆ 2 ಆಣೆ ಕ್ಷೇತ್ರವನ್ನು ನಿಮ್ಮ ತಂದೆಯವರು ಯಾವಾಗ ಖರೀದಿ ಮಾಡಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು 1956 ರಲ್ಲಿ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ಸ್ವತ್ತು ಅವಿಭಕ್ತ ಕುಟುಂಬದ ಪರವಾಗಿ
ನನ್ನ ತಂದೆಯ ಹೆಸರಿಗೆ ಕ್ರಯ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖರೀದಿ ಕಾಲದಲ್ಲಿ ನಿಮ್ಮ ತಂದೆಯವರು ಪ್ರತ್ಯೇಕವಾಗಿ ವಾಸವಿದ್ದರು ಎಂದು ಹೇಳಲು ನಿಮ್ಮ ಹೇಳಿಕೆಯನ್ನು ಹೊರತುಪಡಿಸಿ ಬೇರೇ ಯಾವುದೇ ದಾಖಲೆ ಇದೆಯೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು 1956 ನೇ ಇಸವಿಯಲ್ಲಿ ಖರೀದಿ ಮಾಡಿದ ಖರೀದಿ ಪತ್ರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ .

ದಾವಾಸ್ತಿಗಳಲ್ಲಿ ವಾದಿಯರಿಗೆ 1/3 ಅಂಶ ಹಕ್ಕಿನ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. 2019 ರಲ್ಲಿ ದಾವಾಸ್ವತ್ತುಗಳಲ್ಲಿ ಆಸ್ತಿಯನ್ನು ವಿಭಾಗ ಮಾಡಲು ನೀವು ಇನಕಾರ್ ಮಾಡಿರುತ್ತಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ .

ವಾದಿಯವರಿಗೆ ದಾವಾಸ್ವತ್ತುಗಳಲ್ಲಿ ಹಿಸ್ಸೆಯನ್ನು ಕೊಡಬಾರದು ಎನ್ನುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಹಿಲ್ಲಾ ನಾಯ್ಕ ರವರ ಮಕ್ಕಳು 1950 ನೇ ಇಸವಿಯ ಪೂರ್ವದಿಂದಲೂ ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದು ಸುಳ್ಳು ಹೇಳಿಕೆ



ನೀಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ವಾದಿಯರಿಗೆ 1/3 ಅಂಶ ಹಕ್ಕಿನ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 7 ರಿಂದ 9 ನೇ ಪ್ರತಿವಾದಿ ಪರ ವಕೀಲರಿಂದಃ**

7 ರಿಂದ 9 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದರಿಂದ ಆಲಿಸಿ ಅಳವಡಿಸಿಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ